# ಬೈಕ್‌ನಲ್ಲಿ ಭಾರತ ದರ್ಶನ




**ಒಂಬತ್ತನೇ ವಯಸ್ಸಿಗೇ ಬೈಕ್ ಕ್ರೇಜ್ ಹತ್ತಿಸಿಕೊಂಡಿದ್ದ ಕೋಮಲ್ ಪಾಟೀಲ್, ಇತ್ತೀಚೆಗೆ ಏಕಾಂಗಿಯಾಗಿ ಬೈಕ್‌ನಲ್ಲಿ ಭಾರತ ಪರ್ಯಟನೆ ಮಾಡಿ ಬಂದಿದ್ದಾರೆ. ಪರ್ಯಟನೆಯೊಂದಿಗೆ ಹಲವು ಅನುಭವಗಳನ್ನೂ ಹೊತ್ತು ತಂದಿದ್ದಾರೆ. ಖಿನ್ನತೆ, ರಸ್ತೆ ಅಪಘಾತ, ದೇಶದ ಭಾವೈಕ್ಯದ ಕುರಿತು ಜಾಗೃತಿ ಮೂಡಿಸಲು ತಮ್ಮ ಮೊದಲ ಯಾನವನ್ನು ಬಳಸಿಕೊಂಡ ಅವರ ಅನುಭವ ಕಥನ ಇಲ್ಲಿದೆ.**

■ **ಸುಮಲತಾ ಎನ್**

ಮಹಿಳೆಯರು ಏಕಾಂಗಿಯಾಗಿ ಬೈಕ್ ಯಾನ ಮಾಡುವುದು ಸುರಕ್ಷಿತವೇ ಎಂಬುದು ಈಗಲೂ ಹಲವರ ಪ್ರಶ್ನೆ. ಏಕೆ ಸಾಧ್ಯವಿಲ್ಲ ಎಂಬ ಪ್ರಶ್ನೆಯನ್ನಿಟ್ಟುಕೊಂಡೇ ಹಲವು ರಾಜ್ಯಗಳ ಸೋಲೊ ರೈಡ್ ಮಾಡಿ ಬಂದಿದ್ದಾರೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಕೋಮಲ್ ಪಾಟೀಲ್.

ಮೆಕಾನಿಕಲ್ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ 19 ವರ್ಷದ ಕೋಮಲ್ ಪಾಟೀಲ್ ಅವರಿಗೆ ಚಿಕ್ಕಂದಿನಿಂದಲೂ ಬೈಕ್ ಎಂದರೆ ಭಾರೀ ಪ್ರೀತಿ. ಬೈಕ್‌ನಲ್ಲೇ ಭಾರತ ಸುತ್ತಿ ಬರಬೇಕೆಂಬ ಬಯಕೆ. ಇದೀಗ ಅವರ ಬಯಕೆಯ ಮೊದಲ ಯಾನ ಸಾಕಾರವಾಗಿದ್ದು, ಭಾರತದ ಒಂಬತ್ತು ರಾಜ್ಯಗಳನ್ನು ಒಬ್ಬಂಟಿಯಾಗಿ ಸುತ್ತಿ ಬಂದಿದ್ದಾರೆ.

ಕೋಮಲ್ ಅವರಿಗೆ ಬೈಕ್ ಕ್ರೇಜ್ ಪೋಷಕರಿಂದ ಬಂದ ಬಳುವಳಿ. 'ಬೈಕ್ ರೈಡಿಂಗ್ ಪ್ಯಾಷನ್ ನನಗೆ ಚಿಕ್ಕಂದಿನಿಂದಲೇ ಇತ್ತು. ನನ್ನ ಅಪ್ಪ, ಅಮ್ಮ ಇಬ್ಬರೂ ಬೈಕರ್‌ಗಳು. ಅವರಿಂದಲೇ ರೈಡಿಂಗ್ ಬಳುವಳಿಯಾಗಿ ಬಂದಿದೆ. ಬೈಕ್, ಕಾರುಗಳೆಂದರೆ ನನಗೆ ಬಹಳ ಇಷ್ಟ. ನಾನು ಎಂಟು ವರ್ಷದವಳಿದ್ದಾಗ ಮೊದಲು ಕಾರು ಓಡಿಸುವುದನ್ನು ಕಲಿತೆ. ಒಂಬತ್ತನೇ ವಯಸ್ಸಿಗೆ ಬರುತ್ತಿದ್ದಂತೆ ಬೈಕ್ ಓಡಿಸಲು ಆರಂಭಿಸಿದೆ. ಹದಿನೆಂಟನೇ ವರ್ಷದ ಹುಟ್ಟುಹಬ್ಬಕ್ಕೆ ನನ್ನ ಅಪ್ಪ ಕೆಟಿಎಂ ಬೈಕ್ ಅನ್ನು ಉಡುಗೊರೆಯಾಗಿ ಕೊಡಿಸಿದರು. ಈ ಬೈಕ್‌ನ ಮೊದಲ ಲಾಂಗ್ ರೈಡ್ ಅರ್ಥಗರ್ಭಿತವಾಗಿರಬೇಕು ಎಂಬ ಕಾರಣಕ್ಕೆ ಈ ಸೋಲೊ ರೈಡ್ ಕೈಗೊಂಡೆ' ಎಂದು ತಮ್ಮ ಬೈಕ್ ನಂಟಿನ ವಿವರ ನೀಡಿದರು ಕೋಮಲ್.

ಕಳೆದ ಫೆಬ್ರುವರಿ 4ಕ್ಕೆ ಕೇರಳದ ಅಮೃತ ಜೋಶಿ ಎಂಬ 21 ವಯಸ್ಸಿನ ಯುವತಿ ಸೋಲೊ ರೈಡಿಂಗ್ ಮಾಡಿ, 'ಯಂಗೆಸ್ಟ್ ಸೋಲೊ ರೈಡರ್ ಆಫ್ ಇಂಡಿಯಾ' ಎಂಬ ದಾಖಲೆ ಬರೆದರು. ಇದನ್ನು ಗಮನಿಸಿದ, ಸಣ್ಣ ವಯಸ್ಸಿನಿಂದಲೂ 'ಸೋಲೊ ರೈಡರ್' ಆಗುವ ಕನಸು ಹೊತ್ತಿದ್ದ ಕೋಮಲ್ ಅವರಿಗೆ ತಮ್ಮ ಕನಸು ಸಾಕಾರ ಮಾಡಿಕೊಳ್ಳುವ ಸಮಯ ಬಂದಿತ್ತು.

'ಸೋಲೊ ರೈಡಿಂಗ್‌ನಲ್ಲಿ ಕರ್ನಾಟಕದ ಹೆಸರು ತರಬೇಕು ಎಂಬುದು ಹಟದಂತೆ ಕಾಡಿತು. ಅಪ್ಪ ಕೊಡಿಸಿದ್ದ ಬೈಕ್ ಜೊತೆಗಿತ್ತು. ಪರ್ಯಟನೆ ಮಾಡುವ ಆಲೋಚನೆಗೆ ಕಿಡಿ ಹೊತ್ತಿದ್ದೇ, ಎಲ್ಲಾ ತಯಾರಿಗಳನ್ನು ಮಾಡಿಕೊಂಡೆ. ಅಪ್ಪ–ಅಮ್ಮ ಸಾಥ್ ನೀಡಿದರು. ಮಾರ್ಚ್ 8, ವಿಶ್ವ ಮಹಿಳಾದಿನದಂದು ನನ್ನ ಯಾನ ಆರಂಭಿಸಿದೆ' ಎಂದರು.

## ಸಂದೇಶ ಸಾರಲು ಬೈಕ್ ಸಾರಥ್ಯ

> **ರಾಣೆಬೆನ್ನೂರಿನ ಹುಡುಗಿಯ ಸೋಲೊ ರೈಡ್ ಸಾಹಸ**

ಮೊದಲ ದೀರ್ಘ ಯಾನ ವಿಶೇಷ ಹಾಗೂ ಅರ್ಥಗರ್ಭಿತವಾಗಿರಬೇಕು ಎಂಬ ಕಾರಣಕ್ಕೆ ಟ್ಯಾಗ್‌ಲೈನ್ ಇಟ್ಟುಕೊಂಡು ಬೈಕ್ ಪ್ರಯಾಣ ಆರಂಭಿಸಿದ್ದರು. 'ಡ್ರೈವ್ ಇಂಡಿಯಾ ಸೇಫ್ಟಿ', 'ಫೈಟಿಂಗ್ ಅಗೇನಸ್ಟ್ ಡಿಪ್ರೆಷನ್', 'ಒನ್ ನೇಷನ್ – ವಿ ಆರ್ ಆಲ್ ಒನ್' ಎಂಬ ಸಂದೇಶದೊಂದಿಗೆ ಜಾಗೃತಿ ಯಾನಕ್ಕೆ ಮುಂದಾದರು.

'ಅಪಘಾತ ತಡೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು 'ಡ್ರೈವ್ ಇಂಡಿಯಾ ಸೇಫ್ಟಿ' ಎಂಬ ಟ್ಯಾಗ್‌ಲೈನ್‌ನೊಂದಿಗೆ ಪ್ರಯಾಣ ಶುರು ಮಾಡಿದೆ. ಇದರೊಂದಿಗೆ, 2020–21ರ ಸಾಲಿನಲ್ಲಿ ಹೆಚ್ಚಾದ ಆತ್ಮಹತ್ಯೆ–ಖಿನ್ನತೆ ಪ್ರಕರಣಗಳ ಕುರಿತ ಜಾಗೃತಿಗೆ 'ಫೈಟಿಂಗ್ ಅಗೇನಸ್ಟ್ ಡಿಪ್ರೆಷನ್', ಸಹಬಾಳ್ವೆಯ ಮಹತ್ವಕ್ಕೆ 'ಒನ್ ನೇಷನ್ – ವಿ ಆರ್ ಆಲ್ ಒನ್' (ಒಂದೇ ದೇಶ, ನಾವೆಲ್ಲರೂ ಒಂದೇ) ಎಂಬ ಸಂದೇಶ ಹೊತ್ತು ಮಹಿಳಾ ದಿನದಂದು ಭಾರತ ದರ್ಶನಕ್ಕೆ ಪ್ರಯಾಣ ಆರಂಭಿಸಿದೆ'' ಎಂದು ವಿವರಿಸಿದರು.

ಮಾರ್ಚ್ 8ರಂದು ಆರಂಭಗೊಂಡ ಅವರ ಪಯಣ ಮಾರ್ಚ್ 28ರಂದು ಕೊನೆಯಾಯಿತು. ಈ ಇಪ್ಪತ್ತು ದಿನಗಳಲ್ಲಿ ಒಂಬತ್ತು ರಾಜ್ಯಗಳ ಪರಿಚಯ ಮಾಡಿಕೊಂಡರು. ರಾಣೆಬೆನ್ನೂರಿನಿಂದ ಆರಂಭವಾಗಿ ಮುಂಬೈ, ವಡೋದರ, ಉದಯಪುರ, ಜೈಪುರ, ಅಮೃತಸರ, ವಾಘಾ, ಶ್ರೀನಗರ, ಲೂದಿಯಾನ, ಹರಿಯಾಣ, ದೆಹಲಿ, ಆಗ್ರಾ, ಇಂದೋರ್, ಔರಂಗಬಾದ್, ಸೋಲಾಪುರವನ್ನು ಹಾದು, ಕರ್ನಾಟಕದ ವಿಜಯಪುರ, ಬಾಗಲಕೋಟೆ ಮೂಲಕ ಮರಳಿ ರಾಣೆಬೆನ್ನೂರು ಸೇರಿದರು.

ಮೊದಲ ದಿನ, 750 ಕಿ.ಮೀ. ಕ್ರಮಿಸಿದ ಅವರು, ನಂತರದಲ್ಲಿ ಪ್ರತಿ ದಿನವೂ 500ರಿಂದ 700 ಕಿ.ಮೀ. ಸಾಗುತ್ತಿದ್ದರು. ಒಟ್ಟಾರೆ ಮೊದಲ ಭಾರತ ಪರ್ಯಟನೆಯಲ್ಲಿ ಸುಮಾರು 6200 ಕಿ.ಮೀ. ಕ್ರಮಿಸಿದ್ದಾರೆ.

## ಭಾರತ ದರ್ಶನದ ಬುತ್ತಿ

'ಇದೇ ನನ್ನ ಮೊದಲ ರೈಡ್. ಕೊರೊನಾ, ಓದಿನ ಕಾರಣವಾಗಿ ಎಲ್ಲೂ ಹೋಗಿರಲಿಲ್ಲ. ಹೀಗಾಗಿ ಈ ಪ್ರಯಾಣ ನನಗೆ ಕುತೂಹಲದ ವಿಷಯವಾಗಿತ್ತು. ಈ ಇಡೀ ಪ್ರಯಾಣ ತುಂಬಾ ಹಿತಕರವೆನಿಸಿತು. ಸ್ವಾತಂತ್ರ್ಯದ ನಿಜ ಅನುಭವ ದಕ್ಕಿತು. ಚಿಕ್ಕವಳಿದ್ದಾಗಿನಿಂದಲೂ ನಾನು ಯಾವುದಕ್ಕೂ ಹೆದರುತ್ತಿರಲಿಲ್ಲ. ಈ ಹಟ–ಧೈರ್ಯವೇ ನನಗೆ

